ಅವನ ಮುಖದಲ್ಲಿ ಚಿಂತೆ ಇತ್ತು. 'ಇಮ್ತಿಯಾಜ್ ಅಪಾಯದಲ್ಲಿದ್ದಾನೆ' ಎಂದನು.

***

'ಕಾಡಿನ ಮಧ್ಯ ಈ ಗುಂಡಿ ಯಾರು ತೋಡಿದರು?' ತಲೆಯನ್ನು ಕೈಗಳಿಂದ ಹಿಡಿದುಕೊಂಡು ಚಿಂತೆಯಿಂದ ಹೇಳಿದನು ಪ್ರೇಮ್.

'ಪೋಚರ್ಸ್ ತೋಡಿರಬಹುದು. ಪ್ರಾಣಿಗಳಿಗೋಸ್ಕರ ಈ ರೀತಿ ಗುಂಡಿ ತೋಡುತ್ತಾರೆಂದು ನೀನೇ ಹೇಳಿದೆಯಲ್ಲ?'

'ಎಷ್ಟು ಹೊತ್ತು ಇರಬೇಕು ಈ ಹಳ್ಳದಲ್ಲಿ?' ಅವನ ಧ್ವನಿಯಲ್ಲಿ ಕೋಪ ಬೆರೆತಿತ್ತು.

'ಯಾರಾದರೂ ಬಂದು ಕಾಪಾಡುವವರೆಗೆ ಇಷ್ಟೇನೇ' ಎಂದಳು.

'ಈ ಕಾಡಿನೊಳಗೆ ಯಾರು ಬರುತ್ತಾರೆ?'

'ಕತ್ತಲಾದ ಮೇಲೆ ಪೋಚರ್‌ಗಳು ಬರುತ್ತಾರೆ. ಆದರೆ ಅವರು ಬಂದರೂ ನಮ್ಮನ್ನು ಕಾಪಾಡುವುದಿಲ್ಲ. ಸಾಯಿಸುತ್ತಾರಷ್ಟೇ. ಪೊಲೀಸರಿಗೆ ಹೇಳುತ್ತೇವೆ ಎನ್ನುವ ಅನುಮಾನದಲ್ಲಿ ನಮ್ಮನ್ನು ಬದುಕಲು ಬಿಡುವುದಿಲ್ಲ. ಆದರೆ ಅವರು ಬರುಷ್ಟರಲ್ಲಿ ಯಾವುದಾದರೂ ಮೃಗ ನಮ್ಮನ್ನು ತಿಂದು ಬಿಡುತ್ತದೆ' ಎಂದಳು.

'ಮತ್ಯಾಕೆ ಸುಮ್ಮನಿದ್ದೀಯ? ಏನಾದರೂ ಮಾಡು' ಎಂದು ಪ್ರೇಮ್ ಕಿರುಚಿದನು.

ಅವಳು ಉದ್ರೇಕದಿಂದ 'ಏನು ಮಾಡಲಿ? ಏನು ಮಾಡು ಅಂತೀಯ ನೀನು? ನನ್ನ ಗಂಡನನ್ನು ಸಾಯಿಸಿದೆ. ನನ್ನ ತಂದೆಯನ್ನು ತೋರಿಸುತ್ತೇನೆ ಎಂದು ಇಲ್ಲಿಯವರೆಗೆ ಕರೆತಂದೆ. ಏನು ಮಾಡಲಿ.... ಇನ್ನೇನು ಮಾಡಲಿ ನಾನು? ಎಂದು ಅಳಲಾರಂಭಿಸಿದಳು.

ಆ ಹಠಾತ್ ಪರಿಣಾಮಕ್ಕೆ ಅವನು ದಿಗ್ಭ್ರಾಂತನಾದನು. ಆದರೆ ಸ್ವಲ್ಪ ಹೊತ್ತಿನಲ್ಲೇ ಅವಳು ಚೇತರಿಸಿಕೊಂಡಳು. 'ಹಿಂದೆ ನಡೆದಿದ್ದನ್ನು ಮರೆತು ಮುಂದೇನು ಮಾಡಬೇಕೆಂದು ಯೋಚಿಸೋಣ. ಈಗ ನಮಗೆ ಎದುರಾಗುವ ಅಪಾಯ ಪ್ರಾಣಿಗಳಿಂದ, ಪೊಲೀಸರಿಂದ ಅಲ್ಲ. ಇನ್ನೊಂದು ಗಂಟೆಯಲ್ಲಿ ನಿನಗೆ ಡ್ರಗ್ಸ್ ಇಂಜೆಕ್ಷನ್ ಬೇಕಲ್ಲ? ಇಲ್ಲದಿದ್ದರೆ ರಾತ್ರಿಯೊಳಗೆ ಆ ಹಳ್ಳದಲ್ಲೇ ಸತ್ತು ಹೋಗ್ತೀಯ. ಅದು ಮಹಾ ದಾರುಣವಾದ ಸಾವು. ಮೊದಲು ಹುಚ್ಚು ಹಿಡಿಯುತ್ತದೆ. ನಂತರ ಡಿಲಿರಿಯಂ ಬರುತ್ತದೆ' ಎಂದಳು.

ಆ ವಿಷಯ ನೆನಪಾಗಿ ಕಂಪಿಸಿದನು. 'ಡಿಲಿರಿಯಂ... ಡಿಲಿರಿಯಂ... ಡಿಲಿರಿಯಂ' ಎಂದು ತನ್ನಲ್ಲಿ ತಾನು ಗೊಣಗಿಕೊಂಡನು. ಸಮಯಕ್ಕೆ ಸರಿಯಾಗಿ ಡ್ರಗ್ ಸಿಗದ್ದರೆ ಆ ಪರಿಸ್ಥಿತಿ ಹೇಗಿರುತ್ತದೆಯೆಂದು ಅವನಿಗೆ ಅನುಭವವಾಗಿತ್ತು.

ಕತ್ತಲಾಗುತ್ತಿತ್ತು. ಮೋಡಗಳು ಆವರಿಸಿದ್ದವು. ದೊಡ್ಡ ಮಳೆ ಆಗುವ ಹಾಗಿತ್ತು. ಮಳೆ ಬಂದರೆ ನೀರು ಹಳ್ಳದಲ್ಲಿ ತುಂಬುತ್ತದೆ.

'ಏನಾದರೂ ಮಾಡು.... ಯಾರಿಗಾದರೂ ಫೋನ್ ಮಾಡು, ಆದರೆ ನಿನ್ನ ಫ್ರೆಂಡ್ಸ್‌ಗೆ ಮಾತ್ರ ಫೋನ್ ಮಾಡಬೇಡ, ಪೊಲೀಸರು ಟ್ರ್ಯಾಪ್ ಮಾಡಿರುತ್ತಾರೆ. ರಾತ್ರಿಯೊಳಗಾಗಿ ನಮ್ಮನ್ನು ಕಾಪಾಡಿ ಸೇಫ್ ಆಗಿ ಕರೆದುಕೊಂಡು ಹೋಗುವವರು ಬೇಕು' ಎಂದಳು. 'ರಾತ್ರಿಯೊಳಗಾಗಿ' ಎಂಬ ಪದವನ್ನು ಒತ್ತಿ ಹೇಳಿದ್ದಳು.

ಅವನು ಯೋಚಿಸುತ್ತಿದ್ದನು.

'ನಾನೀಗ ನಿನ್ನನ್ನು ಬಿಟ್ಟು ಹೋಗಬಹುದು. ಆದರೆ ಹೋಗುವುದಿಲ್ಲ. ಪ್ರೇಮಕ್ಕಿಂತ ಪ್ರಾಣ ದೊಡ್ಡದಲ್ಲ ಅಂದೆ. ಹೇಗಾದರೂ ಇಲ್ಲಿಂದ ಪಾರಾದರೆ ನಾವು ಸರಹದ್ದು ದಾಟಿ ಹೋಗಿ ಬಿಡಬಹುದು. ಕೊನೆಯ ಪ್ರಯತ್ನವಾಗಿ ಏನು ಮಾಡಬಹುದೋ ಯೋಚನೆ ಮಾಡು' ಎಂದಳು.

ಅವನು ಒಂದು ನಿರ್ಣಯಕ್ಕೆ ಬಂದವನಂತೆ ಜೇಬಿನಿಂದ ಫೋನ್ ತೆಗೆದು ಬ್ಯಾಟರಿ ಸೇರಿಸಿ ಡಯಲ್ ಮಾಡಿದನು.

ಆ ಕಡೆಯಿಂದ 'ಹಲೋ' ಎಂದು ಕೇಳಿಸಿದ ತಕ್ಷಣ 'ಜೆ.ಬಿ.ಎಲ್' ಎಂದನು.

'ಹಹ... ಪಾಸ್‌ವರ್ಡ್ ಕರೆಕ್ಟೇ. ಜ್ಯೂನಿಯರ್ ಬಿನ್ ಲಾಡೆನ್. ಎಮರ್ಜೆನ್ಸಿ ಇರದಿದ್ದರೆ ಫೋನ್ ಮಾಡಬೇಡ ಅಂದಿದ್ದೆನಲ್ಲ?' ಎಂದು ಆಚೆ ಬದಿಯಿಂದ ಕೇಳಿಸಿತು.

'ಅಪಾಯದಲ್ಲಿದ್ದೇನೆ. ಅಡ್ಡಗುಡ್ಡೆ ಕಾಡಿನಲ್ಲಿ... ಅದಕ್ಕೇ ಮಾಡಿದೆ'

'ಕಾಡಿಗೆ ಯಾಕೆ ಹೋದೆ?'

'ಒಬ್ಬಾಕೆಯ ಜೊತೆ ಸೇರಿ ಮರ್ಡರ್ ಮಾಡಿ, ಇಲ್ಲಿ ಹಳ್ಳದಲ್ಲಿ ಸಿಕ್ಕಿಕೊಂಡೆ'

'ಮರ್ಡರಾ? ಯಾರನ್ನು? ಏಕೆ ಮಾಡಿದೆ?'

'ಪ್ರಶ್ನೆಗಳನ್ನು ಕೇಳುತ್ತಾ ಇರುತ್ತೀಯಾ? ತಕ್ಷಣ ಬರುತ್ತೀಯಾ?'

'ತಕ್ಷಣ ಅಲ್ಲಿಗೆ ಬರ್ತಿದ್ದೇನೆ'

ಪ್ರೇಮ್ ಇನ್ನೇನೋ ಹೇಳಲು ಹೊರಟಾಗ ಲೈನ್ ಕಟ್ ಆಯಿತು.. ಮತ್ತೆ ಎಷ್ಟು ಪ್ರಯತ್ನಿಸಿದರೂ ಲೈನ್ ಸಿಗಲಿಲ್ಲ. ಅಷ್ಟರಲ್ಲಿ ಆಂಟೀ ಟೆರರಿಸ್ಟ್ ಸ್ಕ್ವಾಡ್‌ನ ಫೋನ್ ಟ್ರಾಕಿಂಗ್ ರೂಂನಲ್ಲಿ ಕೃಷ್ಣ ಸಿಗ್ನಲ್ಸ್ 'ಜಾಮ್' ಮಾಡಿದ್ದನು!

ಸೆಲ್‌ಫೋನ್‌ನಿಂದ ಬ್ಯಾಟರಿ ತೆಗೆಯುತ್ತಾ ಪ್ರೇಮ್‌ಜಿತ್ 'ನಾನು ಫೋನ್ ಮಾಡಿದ ವ್ಯಕ್ತಿ ಬರುವುದಕ್ಕೆ ಒಂದು ಗಂಟೆಯಾಗಬಹುದು. 'ನೌ ಐಯಾಂ ರಿಲ್ಯಾಕ್ಸಡ್. ನಾವು ಕಾಶ್ಮೀರಕ್ಕೆ ಹೋಗಬಹುದು... ನೀನು ಕೂಡಾ ಜಂಪ್ ಮಾಡು, ಕಾಡಿನಲ್ಲಿ ಸಿಕ್ಕಿದೆ ಒಳ್ಳೆಯ ಛಾನ್ಸ್. ಈ ಹಳ್ಳದಲ್ಲೇ ಮಾಡೋಣ ರೊಮ್ಯಾನ್ಸ್' ಎಂದನು.

ಹಳ್ಳದೊಳಕ್ಕೆ ಬಾಗಿ ನೋಡುತ್ತ 'ಅಷ್ಟು ಚೆನ್ನಾಗಿ ರೊಮ್ಯಾನ್ಸ್ ಮಾಡಬಲ್ಲೆಯೇನು ಇಮ್ತಿಯಾಜ್ ಖಾನ್... ಉರುಫ್ ಪ್ರೇಮ್‌ಜಿತ್?' ಎಂದಳು.

ಅವಳೇನು ಮಾತನಾಡಿದಳೋ ಮೊದಲು ಅರ್ಥವಾಗಲಿಲ್ಲ. ಅರ್ಥವಾದಾಗ ಎದ್ದು ನಿಂತು 'ಏನಂದೆ? ಇಮ್ತಿಯಾಜ್?' ಎಂದು ಕೇಳಿದನು.

'ಎಸ್ ಮಿಸ್ಟರ್ ಇಮ್ತಿಯಾಜ್'

'ನನ್ನ ಹೆಸರು ನಿನಗೆ ಹೇಗೆ ತಿಳಿಯಿತು?' ಕಿರುಚಿದನು ಪ್ರೇಮ್‌ಜಿತ್.

'ನಡೆದಿದ್ದನ್ನೆಲ್ಲ ಹೇಳಿದರೆ ಕೇಳಿ ತಡೆದುಕೊಳ್ಳುವ ಶಕ್ತಿ ನಿನಗಿದೆಯಾ ಇಮ್ತಿಯಾಜ್ ಬಿನ್ ಲಾಡೆನ್? ಹಾಗಾದರೆ ಹೇಳುತ್ತೇನೆ ಕೇಳು' ಎಂದಳು ನಿತ್ಯಕಲ್ಯಾಣಿ.

—18—

ಮಗನಿಂದ ಫೋನ್ ಬರುವುದಕ್ಕೆ ಮೊದಲು ಹಲ್ರಾಫ್–ಮಿಜ್ರಾಡಿನ್‌ರ ಸಂಭಾಷಣೆ ಹೀಗೆ ನಡೆದಿತ್ತು.

'ಹೇಳು ಹಲ್ರಾಫ್... ನನ್ನ ಮಗನ ಬಗ್ಗೆ ಏನೋ ಮಾತನಾಡಬೇಕು ಅಂದೆಯಂತಲ್ಲ?' ಮಿಜ್ರಾಡಿನ್ ಕೇಳಿದನು.

ಹಲ್ರಾಫ್ ಸಂದೇಹಪಡುತ್ತಾ ಸುಮ್ಮನಿದ್ದನು. 'ಹೇಳು ಏನು ವಿಷಯ?' ಎಂದು ಗದರಿಸಿ ಕೇಳಿದನು ಮಿಜ್ರಾಡಿನ್.

'ಇಮ್ತಿಯಾಜ್ ಕಾಲೇಜಿಗೆ ಹೋಗುತ್ತಾ ಇಲ್ಲ. ನೋಟಿಸ್ ಕೊಟ್ಟಿದ್ದಾರೆ. ನಿನ್ನ ಮಗ ಡ್ರಗ್ಸ್ ಅಭ್ಯಾಸಕ್ಕೆ ಬಲಿಯಾಗಿದ್ದಾನೆ. ಪ್ರಿನ್ಸಿಪಾಲ್ ಅವನನ್ನು ಕೌನ್ಸಿಲರ್ ಬಳಿಗೆ ಕಳಿಸಿದ್ದರಂತೆ... ಒಬ್ಬ ಬ್ಯಾಂಕ್ ಆಫೀಸರ್ ಹೆಂಡತಿ ಅವನಿಗೆ ಡ್ರಗ್ಸ್ ಅಭ್ಯಾಸ ಮಾಡಿಸಿದಳು. ಅವಳ ಗಂಡ ಯಾವಾಗಲೂ ಟ್ಯೂರ್ ಹೋಗುತ್ತಾ ಇರುತ್ತಾನೆ. ಆಗೆಲ್ಲ ಇವನನ್ನು ಮನೆಗೆ ಕರೆಸಿಕೊಳ್ಳುತ್ತಾಳೆ. ಈಗ ಇಮ್ತಿಯಾಜ್ ಅವಳ ವ್ಯಾಮೋಹದಲ್ಲಿ ಸಿಕ್ಕಿದ್ದಾನೆ.

ಮಿಜ್ರಾಡಿನ್ ಸ್ತಬ್ಧನಾಗಲಿಲ್ಲ. ತಲೆಯಾಡಿಸುತ್ತಾ 'ಹೌದು, ಮೊನ್ನೆ ನನಗೆ ಈ ವಿಷಯಾನ ಇಮ್ತಿಯಾಜ್ ತಿಳಿಸಿದ. ಹೋಗಿ ಆ ಆಫೀಸರ್‌ನ ಹೆಂಡತಿಯನ್ನು ಸಾಯಿಸಿ, ಇಮ್ತಿಯಾಜ್‌ನ ನನ್ನ ಜೊತೆ ಕರೆದುಕೊಂಡು ಬಂದು ಬುದ್ಧಿ ಮಾತು ಹೇಳಿದೆ, ಈಗ ಯಾವ ಸಮಸ್ಯೆ ಇಲ್ಲ. ಇಮ್ತಿಯಾಜ್ ಪೂರ್ತಿ ಬದಲಾಗಿದ್ದಾನೆ ಅಂತ ಹೇಳಿದ' ಎಂದನು.

'ಬದಲಾಗಿಲ್ಲ ಭಾಯ್, ಈಗ ಒಂದು ಪೊಲೀಸ್ ಕೇಸ್‌ನಲ್ಲಿ ಸಿಕ್ಕಿ ಹಾಕಿಕೊಂಡಿದ್ದಾನೆ.'

ಮಿಜ್ರಾಡಿನ್ ಬೆಚ್ಚಿಬಿದ್ದು 'ಏನು? ಪೊಲೀಸ್ ಕೇಸಾ?' ಎಂದನು.

'ಹೌದು, ಒಬ್ಬ ಪೊಲೀಸ್ ಆಫೀಸರ್ ಕೊಲೆ ಮಾಡಿ.....' ಎನ್ನುತ್ತಿರುವಾಗಲೇ ಫೋನ್ ಕಾಲ್ ಬಂದಿತು. ಪ್ರಾಣಕ್ಕೆ ಸಂಚಕಾರ ಬರದ ಹೊರತು ಯಾರೂ ಫೋನ್ ಮಾಡುವುದಿಲ್ಲ. ಆ ನಂಬರ್ ಯಾರಿಗೂ ತಿಳಿದಿರಲಿಲ್ಲ. ಅವನು ಫೋನ್ ಮಾಡಿ ಹಲೋ' ಎಂದನು.

ಆಚೆ ಬದಿಯಿಂದ 'ಜೆ.ಎಲ್.ಬಿ' ಎಂದು ಕೇಳಿಸಿತು.

ಕೊಂಚ ಹೊತ್ತು ಮಾತಾಡಿ ಫೋನ್ ಕಟ್ ಮಾಡಿ ಗಾಬರಿಯಿಂದ 'ಇಮ್ತಿಯಾಜ್ ಅಪಾಯದಲ್ಲಿದ್ದಾನೆ. ತಕ್ಷಣ ಒಂದು ವ್ಯಾನ್ ಅರೇಂಜ್ ಮಾಡು, ಅಡ್ಡಗುಡ್ಡೆ ಕಾಡಿಗೆ ಹೋಗಬೇಕು, ನೀನೂ ನನ್ನ ಜೊತೆ ಬಾ' ಎಂದು ಮಾತಾಡಿ ಗಡಿಬಿಡಿಯಿಂದ ಒಳಗೆ ಹೋದನು. ಅವನಿಗೆ ಮಗನ ಮೇಲೆ ಎಷ್ಟು ಪ್ರೀತಿ ಎಂದು ತಿಳಿದಿರುವುದರಿಂದ ಅವನ ಟೆನ್ಷನ್ ಕಂಡು ಯಾರಿಗೂ ಆಶ್ಚರ್ಯವಾಗಲಿಲ್ಲ.

**(ಸಶೇಷ)**